ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ತಾವು ಹೇಳಿರತಕ್ಕ ವಿಚಾರ ಯಾವುದು ಇದೆ ಅದನ್ನು ಸಿ.ಒ.ಡಿ. ಪೊಲೀಸರಿಗೆ ತಿಳಿಸಿ ಬೇಗನೆ ವಿಚಾರಣೆ ಮುಗಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಹಾಗೆ ಮಾಡುತ್ತೇವೆ. ಬಾಕಿ ಇರತಕ್ಕ ಸರಣಿ ಕೊಲೆ ಪ್ರಕರಣ ಯಾವುದು ಇದೆ ಅದು ನಿಜ. ಕೆಲವು ಸಂದರ್ಭಗಳಲ್ಲಿ ಕೊಲೆ ಆಗುತ್ತದೆ. ಕೊಲೆ ಆದಾಗ ಕೆಲವು ಸಂದರ್ಭಗಳಲ್ಲಿ ಪತ್ತೆ ಹಚ್ಚುವುದಕ್ಕೆ ಕಷ್ಟ ಎಂಬುದು ನಮಗೆ ಗೊತ್ತಿದೆ. ಆ ಭಾಗದಲ್ಲಿರತಕ್ಕವರು ಆಗುವುದಿಲ್ಲ, ಹೊರಭಾಗದಿಂದ ಬರುತ್ತಿರತಕ್ಕದ್ದು, ಹೊರರಾಜ್ಯದಿಂದ ಬರುತ್ತಿರತಕ್ಕದ್ದು ಇರತಕ್ಕ ಸಂದರ್ಭಗಳಲ್ಲಿ ನಾವು ಈ ಚಾಲನೆಯನ್ನು ವ್ಯಾಪಕವಾಗಿ ಹಬ್ಬಿಸಬೇಕಾಗುತ್ತದೆ. ಈ ವಿಚಾರದಲ್ಲಿ ನಮ್ಮ ಸೌತ್ ಕೆನರಾದಲ್ಲಿರತಕ್ಕ ಎಸ್.ಪಿ.ಮತ್ತು ಡಿ.ಐ.ಜಿ. ಇವರಿಬ್ಬರಿಗೆ ನೀವು ಎತ್ತಿರತಕ್ಕ ವಿಚಾರವನ್ನು ಅವರ ಗಮನಕ್ಕೆ ತಂದು ಇದರ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬೇಕೆಂಬ ಸೂಚನೆಯನ್ನು ಸರ್ಕಾರದ ಪರವಾಗಿ ಕೊಡುತ್ತೇನೆ.

ಒ) ವಿಲೇಜ್ ನೋಟಿಫೈ ಆಗದೇ ಇರುವುದರಿಂದ ಗೇಣಿದಾರರಿಗೆ ಆಗುತ್ತಿರುವ ತೊಂದರೆ

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೆ, ಮೈಸೂರು ಪರ್ಸನಲ್ಸ್ ಅಂಡ್ ಮಿಸಲೇನಿಯಸ್ ಇನಾಮ್ಸ್ ಅಬಾಲಿಷನ್ ಆ್ಯಕ್ಟ್ 1954 ಜಾರಿಗೆ ಬಂದ ಸಂದರ್ಭದಲ್ಲಿ ಸೆಕ್ಷನ್ 3(1)ರ ಪ್ರಕಾರ 'the consequences of vesting of inam land with the state' ಎಂಬ ಕಲಮ್‌ನಲ್ಲಿ ಇವತ್ತು ಮೈಸೂರು ಗೆಜಿಟ್‌ನಲ್ಲಿ ಯಾವ ಹಳ್ಳಿ ಎಂದು ನೋಟಿಫೈ ಮಾಡುತ್ತಾರೆ ಆ ಹಳ್ಳಿ ನೋಟಿಫೈ ಆಗಬೇಕು. It is a mandatory provision. ಒಂದು ಹಳ್ಳಿ ನೋಟಿಫೈ ಆದಮೇಲೆ ಆ ಹಳ್ಳಿ ಆ ವ್ಯಾಪ್ತಿಯಲ್ಲಿ ಬರತಕ್ಕದ್ದು; ಇನಾಂ ರದ್ದಿಯಾತಿ ಅಪ್ಲೈ ಆಗತಕ್ಕ ಸಂದರ್ಭ ಇರುವುದರಿಂದ ಸರ್ಕಾರದವರು ಒಂದು ನೋಟಿಫಿಕೇಷನ್ ಇಶ್ಯೂ ಮಾಡಿದರು. 15-9-1956ರಲ್ಲಿ ನೋಟಿಫಿಕೇಷನ್ ಇಷ್ಯೂ ಮಾಡಿ ಇಡೀ ರಾಜ್ಯಾದ್ಯಂತ ಅನೇಕ ಹಳ್ಳಿಗಳು ಯಾವುದು ಆ ಕಾನೂನು ವ್ಯಾಪ್ತಿಯಲ್ಲಿ ಬರುತ್ತದೆಂಬ ಹಳ್ಳಿಗಳನ್ನು ನೋಟಿಫೈ ಮಾಡಿದ ಸಂದರ್ಭದಲ್ಲಿ, ಬೆಂಗಳೂರು ಕಸಬದಲ್ಲಿ ಬರತಕ್ಕ ಕೆ.ಜಿ.ಬ್ಯಾಡರಹಳ್ಳಿ ಎಂಬುದು ಒಂದು ನೋಟಿಫೈ ಆಗಿದೆ. ಕೆ.ಜಿ.ಬ್ಯಾಡರಹಳ್ಳಿ ಅಂದರೆ ಬೆಂಗಳೂರು ಕಸಬದಲ್ಲಿ 4 ಕೆ.ಜಿ.ಬ್ಯಾಡರಹಳ್ಳಿಗಳು ಬಂದು, ಒಂದು ಹಳ್ಳಿ ಸುಬೇದಾರ್ ಮೈಖೇಲ್ ಎಂಬುವವರು ಜೋಡಿದಾರರಾಗಿರತಕ್ಕದ್ದು, ಇನ್ನೊಂದು ರಾಜಮಹಲ್ ಬ್ಯಾಡರಹಳ್ಳಿ ಎಂದು. ಹೀಗೆ ಅನೇಕ ರೀತಿಯ ಬ್ಯಾಡರಹಳ್ಳಿಗಳು ಇರುವುದರಿಂದ ಯಾವ ಹಳ್ಳಿ ಸುಬೇದಾರ್ ಮೈಖೇಲ್ ಜೋಡಿದಾರರಾಗಿದ್ದ ವ್ಯಾಪ್ತಿಯಲ್ಲಿ ಬರತಕ್ಕ ಹಳ್ಳಿ ನೋಟಿಫೈ ಆಗಿದೆಯೇ ಇಲ್ಲವೇ ಎಂಬುದು ಅನುಮಾನಾಸ್ಪದವಾಗಿದೆ. ಆ ಸಂದರ್ಭದಲ್ಲಿ ಜೋಡಿದಾರರಾಗಿರತಕ್ಕ ಮೈಖೇಲ್ ಅವರು ಹೈಕೋರ್ಟ್‌ನ್ನು ಅಪ್ರೋಚ್ ಮಾಡಿದ ಸಂದರ್ಭದಲ್ಲಿ ಹೈಕೋರ್ಟ್ ಆದೇಶ ಈ ರೀತಿ ಇದೆ:

"If the entry does not relate to the inam village of the petitioner, he will not be affected thereby." ಜ: ಗೋವಿಂದ ಭಟ್ ಅವರ ಬೆಂಚ್‌ನಲ್ಲಿ ತೀರ್ಮಾನವಾಗಿ ಈ ಒಂದು ಆದೇಶ ಆಗಿದೆ. ಅದೇ ರೀತಿ ಅದಕ್ಕನುಗುಣವಾಗಿ ಬೆಂಗಳೂರಿನ ಜಿಲ್ಲಾಧಿಕಾರಿಗಳೂ ಕೂಡ ಒಂದು ಆರ್ಡರ್ ಬರೆಯಬೇಕಾದರೆ:

"K.G.Byadralli is not vested village for which Jodidar Subhedar Michael ಹೆಸರಿನಲ್ಲಿ ಜಿಲ್ಲಾಧಿಕಾರಿಗಳಿಂದ ಆದೇಶವಾಗಿದೆ. ಈಗ ನನ್ನ ಪ್ರಶ್ನೆ ಇರತಕ್ಕದ್ದು ಇವತ್ತು ಇದರ ಪರಿಣಾಮ ಏನಾಗಿದೆ? ವಿಲೇಜ್ ನೋಟಿಫೈ ಆಗಿಲ್ಲದೆ ಇರುವುದರಿಂದ ಅಲ್ಲಿ ಅರ್ಹಗೇಣಿದಾರರಿಗೆ ಅವರ ಹಕ್ಕನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ಅಲ್ಲಿ ಸುಮಾರು 114 ಸರ್ವೆ ನಂಬರ್‌ನಲ್ಲಿ ಇರತಕ್ಕ ನೂರಾರು ಎಕರೆ ಇರತಕ್ಕ ಜಮೀನು, more than 50 percent of the area comes under the Government's purview. ಕೆರೆ ಇದೆ, ಕಟ್ಟೆ ಇದೆ. ಇವತ್ತು ಆ ಕೆರೆಕಟ್ಟೆಯನ್ನು ಬೇರೆಯವರು ಯಾರೋ ಒಬ್ಬರು ಆಕ್ಯುಪೈ ಮಾಡಿಕೊಂಡು ಇಲ್ಲದ ಡಾಕ್ಯುಮೆಂಟ್ ಕ್ರಿಯೇಟ್ ಮಾಡತಕ್ಕ ಪ್ರಕಾರ ನಡೆಯುತ್ತಿರತಕ್ಕದ್ದು. ಇವತ್ತು ಕೋಟ್ಯಾಂತರ ರೂಪಾಯಿಗಳ ಬೆಲೆಬಾಳತಕ್ಕ ಆಸ್ತಿ ಸರ್ಕಾರಕ್ಕೆ ಸಲ್ಲಬೇಕಾಗಿರತಕ್ಕ ಆಸ್ತಿ ಏನಿದೆ ಇದನ್ನು ತಾವು ಯಾವ ರೀತಿ ನೋಟಿಫೈ ಮಾಡುತ್ತೀರೆಂಬುದನ್ನು ವಿಚಾರ ಮಾಡಬೇಕು. ಜೋಡಿದಾರರಾಗಿರತಕ್ಕ ಕೆ.ಜಿ.ಬ್ಯಾಡರಹಳ್ಳಿಯನ್ನು ನೀವು ನೋಟಿಫೈ ಮಾಡಿ ಆರ್ಜಿ ಹಾಕುವುದಕ್ಕೆ ಇನಾಂ ಅಬಾಲಿಷನ್ ಆ್ಯಕ್ಟ್ ಪ್ರಕಾರ ಅವಕಾಶ ಮಾಡಿಕೊಡದಿದ್ದರೆ ಗೇಣಿದಾರರಿಗೆ ಸಹಾಯವಾಗುವುದಿಲ್ಲ, ಮತ್ತು ಸರ್ಕಾರಕ್ಕೆ ಕೂಡ ಅನುಕೂಲವಾಗುವುದಿಲ್ಲ. ಆದುದರಿಂದ ದಯಮಾಡಿ ತಾವು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯ ಕಾರ್ಯದರ್ಶಿಗಳಿಂದ ವರದಿ ತರಿಸಿ ಒಂದು ವಾರದೊಳಗೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಹಾಗೆ ಮಾಡಿ, ಸಾರ್ವಜನಿಕರ ಆಸ್ತಿ ಖಾಸಗಿಯವರಿಗೆ ಹೋಗದೆ ಇರುವ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ.

(ಬ) ಬನ್ನೇರುಘಟ್ಟ ರಸ್ತೆಯಲ್ಲಿ ಖಾಸಗೀಯವರ ಜಾಗದಲ್ಲಿ ನಿರ್ಮಿಸಿದ್ದ ಕಟ್ಟಡಗಳನ್ನು ಒಡೆದುಹಾಕಿರುವ ಬಗ್ಗೆ

+ ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ತಾವರೆಕರೆ ಗ್ರಾಮದ ಸರ್ವೆ ನಂಬರ್ 50:51:52ರಲ್ಲಿ ಸುಮಾರು 20 ಎಕರೆ ಜಮೀನನ್ನು 1977ರಲ್ಲಿ ಬಿ.ಡಿ.ಎ.ಯಿಂದ ನೋಟಿಫಿಕೇಷನ್ ಮಾಡಿದರು. ಮತ್ತೆ 1984ರಲ್ಲಿ ಫೈನಲ್ ನೋಟಿಫಿಕೇಷನ್ ಮಾಡಿದರು; ಅವಾರ್ಡ್ ಮಾಡಿದರು. 20 ಎಕರೆ ಜಮೀನಿಗೆ 3 ಲಕ್ಷ